ಹೋದವರು ನಾಲ್ಕು ದಿನಗಳ ತರುವಾಯ ವಾಪಸ್ಸಾದೆವು. ನಮ್ಮ ಅನುಪಸ್ಥಿತಿಯಲ್ಲಿ ನೀನು ಜಾಗ್ರತೆಯಿಂದ ಇರುವುದರ ಬಗ್ಗೆ ನಮಗೆ ಅನುಮಾನವಿರಲಿಲ್ಲ. ಕೋಣೆಯಲ್ಲಿ ಯಾರೂ ಬರಲಾಗದ ಸುರಕ್ಷಿತ ಜಾಗವನ್ನು ರಾತ್ರಿ ಮಲಗಲು ನೀನು ಆಯ್ದುಕೊಳ್ಳುತ್ತಿದ್ದೆ. ದಿನಾಲು ಸಂಜೆ ಮನೆಗೆ ಬಂದು ಚುಂಚಿನಿಂದ ಕದ ಕಟಕಿ, ತಾರಸಿಯ ಮೇಲೆ ತುಸು ಹೊತ್ತು ಕಾದು ಹಾರಿ ಹೋಗುತ್ತಿದ್ದ ಸುದ್ದಿ ನೆರೆಹೊರೆಯವರಿಂದ ತಿಳಿಯಿತು. ಮನೆಯ ಬಗ್ಗೆ ನಿನಗಿದ್ದ ಪ್ರೀತಿ ನೋಡಿ ನಮಗೆ ಹೆಮ್ಮೆ ಎನಿಸಿತು. ಮನೆಗೆ ಮರಳಿದ ದಿನ ನಮ್ಮ ಮಾತು ಕೇಳಿಸಿಕೊಂಡ ನೀನು ಅದ್ಯಾವ ಮಾಯೆಯಿಂದಲೊ ಎಲ್ಲಿಂದಲೊ ಹಾರಿ ಬಂದು ನನ್ನ ತಲೆಯ ಮೇಲೆ ಕುಳಿತೆ. ತನ್ನನ್ನು ಯಾಕೆ ಬಿಟ್ಟು ಹೋದೆ ಎಂದು ಸಿಟ್ಟಿನಿಂದ ನೀನು ನನ್ನ ಕಿವಿಯನ್ನು ಮೃದುವಾಗಿ ಚುಂಚಿನಿಂದ ಚುಚ್ಚಿದೆ. ನೀನು ನಮಗೆ ಮತ್ತೊಬ್ಬ ಮಗಳಂತಾದೆ. ಪಕ್ಷಿ ಪ್ರಪಂಚದವಳಾದ ನೀನು ಮನುಷ್ಯ ಸಂಬಂಧವನ್ನು ಬಯಸಿದ್ದು ನಮಗೆ ಸೋಜಿಗದ ಸಂಗತಿಯಾಯಿತು. ರಾಜರ ಕಾಲದಲ್ಲಿ ಟಪಾಲು ತಲುಪಿಸುವ ನಿನ್ನ ಪೂರ್ವಜರ ಕತೆಯನ್ನು ಈಗ ನಾವು ಪೂರ್ಣ ನಂಬುವುದು ಸಾಧ್ಯವಾಯಿತು.

ಒಮ್ಮೆ ನೀನು ಹಾರಿ ಹೋದವಳು ವಾರವಾದರೂ ಬಾರದೆ ಆತಂಕವಾಯಿತು. ನಮ್ಮ ತಳಮಳವನ್ನು ಗಮನಿಸಿದ ಕೇರಿಯವರು, 'ನಿಮ್ಮ ಪಾರಿ ಬಂದೇ ಬರ್ತಾಳೆ. ಬಾಳ ಸಂಗಾತಿ ಸಿಕ್ಕಿರಬಹುದು ಅದಕ್ಕೆ ಸ್ವಲ್ಪ ಲೇಟಾಗಬಹುದು' ಎಂದು ಸಂತೈಸಿದರು. ಮತ್ತೊಂದು ವಾರ ಕಳೆದರೂ ನೀನು ಬರಲಿಲ್ಲ. ನೀನು ಬೇಟೆಗೆ ಬಲಿಯಾಗಿರಬಹುದೆಂದು ದುಃಖಿಸಿದೆವು. ನೀನು ಹಾರಿಹೋಗುತ್ತಿದ್ದ ದಿಕ್ಕಿನಲ್ಲಿರುವ ಕೈಗಾರಿಕೆ ವಸಾಹತು ಪ್ರದೇಶದಲ್ಲಿ ನಿನ್ನ ಹುಡುಕುತ್ತ ಅಲೆದೆವು. ಅಲ್ಲಿ ಹಾರುತ್ತಿದ್ದ ನಿನ್ನ ಪರಿವಾರದವರಲ್ಲಿ ಒಬ್ಬಳಾಗಿ ನೀನಿರಬಹುದೆಂದು ಭ್ರಮಿಸಿ ಕರೆದೆ ನಾನು. ಅವು ಹಾರಿ ಹೋದವು. ನಿರಾಸೆಯಾಗಿ ಮರಳಿದೆ; ನೀನಿಲ್ಲದ ಮನೆ ಬಿಕೋ ಅನಿಸಿತು.

ನಾನೆಸಗಿರಬಹುದಾದ ಪ್ರಮಾದ ಏನಿರಬಹುದೆಂದು ಯೋಚಿಸಿದೆ. ಮನುಷ್ಯರ ನಾಗರಿಕ ಜಗತ್ತಿಗೂ ಪ್ರಾಣಿ, ಪಕ್ಷಿಗಳು ವಾಸಿಸುವ ಅರಾಜಕ ಜಗತ್ತಿಗೂ ಅಗಾಧ ವ್ಯತ್ಯಾಸವಿದೆ. ನಿನಗೆ ನಾನು ರೂಢಿಸಿದ ಹೊರನೋಟಕ್ಕೆ ಸಭ್ಯ ಎಂದೆನಿಸುವ ಮನುಷ್ಯ ಸಮಾಜದ ವ್ಯವಹಾರದಂತೆಯೇ ಪಕ್ಷಿ ಲೋಕದ ನಿಯಮಗಳಿರುವುದಿಲ್ಲ ಎಂಬ ಸತ್ಯವನ್ನು ನಿನಗೆ ತಿಳಿಸಬೇಕಾಗಿತ್ತು. ನಿನ್ನ ಸಾಕಿದ ನಮ್ಮಂತೆಯೇ ಎಲ್ಲ ಮನುಷ್ಯರೂ ಇರುತ್ತಾರೆಂಬ ಸಾಮಾನ್ಯ ಕಲ್ಪನೆ ನಿನ್ನದಾಗಿತ್ತು; ಆದ್ದರಿಂದ ಎಲ್ಲ ಮನುಷ್ಯರೂ ಒಳ್ಳೆಯವರೆಂದು ನಂಬಿ ನೀನು ಮೋಸ ಹೋಗುವಂತಾಗಿರಬಹುದು. ನಮ್ಮ ಜತೆಗಿರುತ್ತಿದ್ದ ನಿನ್ನನ್ನು ನೋಡಿದ ನಮ್ಮ ಮೋನು ನಿನ್ನನ್ನು ಮನೆಯ ಸಹಸದಸ್ಯನೆಂದು ಪರಿಗಣಿಸಿದ್ದ. ಕೇರಿಯ ಬೇರೆ ನಾಯಿ ಹೀಗೆ ಸ್ನೇಹದಿಂದಿರುವುದಿಲ್ಲವೆಂದು ನಿನಗೆ ತಿಳಿ ಹೇಳಬೇಕಿತ್ತು. ಇವೆಲ್ಲ ನನಗೆ ಹೊಳೆಯಲೇ ಇಲ್ಲ. ಈ ಲೋಪದೋಷದಿಂದ ನಿನ್ನ ಜೀವಕ್ಕೆ ಅಪಾಯ ಇದಿರಾಗಬಹುದೆಂದು ನಾನು ಯೋಚಿಸಲೇ ಇಲ್ಲ. ಕೆಲ ದಿನಗಳ ನಂತರ ನೀನು ಕೂತಿರುತ್ತಿದ್ದ ತಾರಸಿಯಲ್ಲಿ ಆಗಾಗ ಗಿಡುಗವೊಂದು ಕಾಣಿಸುತ್ತಿತ್ತು. ಅದು ನಿನ್ನನ್ನು ಬೇಟೆಯಾಡಿರಬಹುದು ಮತ್ತು ಆ ರುಚಿಯ ನೆನಪಿನಲ್ಲಿ ಮತ್ತೊಂದು ಬಲಿಗಾಗಿ ಹೊಂಚು ಹಾಕಿ ಕಾಯುತ್ತಿರಬಹುದೆಂದು ನಾವು ತರ್ಕಿಸಿದೆವು.

ಮಹಡಿಗೆ ಹೋದಾಗಲೆಲ್ಲ ನೀನು ಬಂದಂತೆ ಭಾಸವಾಗುತ್ತದೆ. ನಿನ್ನ ಮುದ್ದು ತುಂಟಾಟಗಳು ಕಾಡುತ್ತವೆ. ನೀನು ಇಹಲೋಕ ತ್ಯಜಿಸಿದೆ ಎಂದು ಕಲ್ಪಿಸುವುದು ಕೂಡಾ ನನ್ನಿಂದ ಸಾಧ್ಯವಿಲ್ಲ. ನೆಲ-ಮುಗಿಲು ಬೆಸೆದ ನಿನ್ನ ನಂಟನ್ನು ಹೇಗೆ ಮರೆಯಲಿ? ನೀನು ಮನೆಗೆ ಬಾರದೆ ಅದಾಗಲೇ ಆರು ತಿಂಗಳು ಕಳೆದವು. ನಿನ್ನ ಊಟದ ಡಬ್ಬಿ, ಗೂಡು ನಿನ್ನ ನಿರೀಕ್ಷೆಯಲ್ಲಿವೆ. ಮೊಬೈಲಿನಲ್ಲಿ ಚಿತ್ರಿಸಿದ್ದ ನಿನ್ನ ಲೀಲೆಗಳನ್ನು ನೋಡಿದಾಗಲೆಲ್ಲ ವಿಷಾದವಾಗುತ್ತಿದೆ. ನಿನ್ನನ್ನು ನೋಯಿಸಿದ್ದಕ್ಕಾಗಿ ಕ್ಷಮೆಯಿರಲಿ. ನೀನೊಮ್ಮೆ ಬಾರದಿದ್ದರೂ ಚಿಂತೆಯಿಲ್ಲ; ಕ್ಷೇಮವಾಗಿದ್ದರೆ ಸಾಕು. ಈ ಬಹಿರಂಗ ಪತ್ರ ನಿನಗೆ ತಲುಪುತ್ತದೆಂದು ನಂಬುವೆ. ನನ್ನೀ ಒಲವಿನೋಲೆಗೆ ಉತ್ತರವಾಗಿ ನೀನು ಹಾಜರಾಗುವೆ ಎಂದು ಆಶಿಸುತ್ತೇನೆ.

ಇಂತಿ ನಿನ್ನ ಬಂಧು.

ಶ್ರೀಧರ ಬಳಗಾರ